# ಕುವೆಂಪು ವಿಶ್ವವಿದ್ಯಾಲಯ

ಸಂಖ್ಯೆ:ಕುವಿ/ಪವಿ/ಡಿಎಸ್/D959./2025-26

ಕುಲಸಚಿವ (ಪರೀಕ್ಷಾಂಗ) ರವರ ಕಛೇರಿ
ಜ್ಞಾನಸಹ್ಯಾದ್ರಿ
ಶಂಕರಘಟ್ಟ – 577451
ದೂರವಾಣಿ: 08282 - 256166
ದಿನಾಂಕ: 28–08–2025

## ಅಧಿಸೂಚನೆ

ವಿಷಯ : **ದೂರಶಿಕ್ಷಣದ 2017–18, 2018–19, ಮತ್ತು 2019–20ನೇ ಸಾಲಿನಲ್ಲಿ ಪ್ರವೇಶ ಪಡೆದ ಗ್ಯಾಪ್ ವಿದ್ಯಾರ್ಥಿಗಳು** ಮತ್ತು ಇತರೆ ಕೋರ್ಸ್‌ಗಳ ಅರ್ಹ ಅನುತ್ತೀರ್ಣ ವಿದ್ಯಾರ್ಥಿಗಳು ಹಾಗೂ ನಿಯಮಾನುಸಾರ ಕೋರ್ಸಿನ ದ್ವಿಗುಣ ಅವಧಿಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಸಲ್ಲಿಕೆ ಮತ್ತು ಶುಲ್ಕ ಪಾವತಿಸುವ ಬಗ್ಗೆ

ಉಲ್ಲೇಖ : 1) ನಿರ್ದೇಶಕರು, ದೂಶಿನಿ ಇವರ ಪತ್ರ ಸಂಖ್ಯೆ: ಕುವಿ/ದೂಶಿನಿ–ಆಶಾ/97/2025–26, ದಿನಾಂಕ:13–05–2025, ಈ ಕಛೇರಿ ಸ್ವೀಕೃತಿ ದಿ.14–05–2025
2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 07–07–2025

********

ವಿಶ್ವವಿದ್ಯಾಲಯದ ದೂರಶಿಕ್ಷಣದ **2017–18, 2018–19, ಮತ್ತು 2019–20ನೇ ಸಾಲಿನಲ್ಲಿ ಪ್ರವೇಶ ಪಡೆದ ಗ್ಯಾಪ್ ವಿದ್ಯಾರ್ಥಿಗಳು** ಹಾಗೂ ಇತರೆ ಕೋರ್ಸ್‌ಗಳ ಅರ್ಹ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಅವಧಿಯಲ್ಲಿ ಪರೀಕ್ಷೆಗಳನ್ನು ಏರ್ಪಡಿಸಲು ಉದ್ದೇಶಿಸಲಾಗಿದೆ. ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾದ ಅನುತ್ತೀರ್ಣ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಹಾಗೂ ನಿಗದಿತ ಶುಲ್ಕಗಳನ್ನು ಕಡ್ಡಾಯವಾಗಿ onlineನಲ್ಲಿ ಈ ಕೆಳಕಂಡ ದಿನಾಂಕದೊಳಗೆ ಪಾವತಿಸಲು ಸೂಚಿಸಲಾಗಿದೆ.

ದೂರಶಿಕ್ಷಣದಲ್ಲಿ 2003–04 ರಿಂದ ವಿವಿಧ ಕೋರ್ಸುಗಳಿಗೆ ಪ್ರವೇಶ ಪಡೆದು ನಿಯಮಾನುಸಾರ ಕೋರ್ಸಿನ ಎರಡುಪಟ್ಟು ಅವಧಿಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಪರಿಗಣಿಸಿ, ದಿನಾಂಕ: 16–02–2024ರ ಸಿಂಡಿಕೇಟ್ ಸಭೆಯ ಹಾಗೂ ದಿನಾಂಕ: 01–10–2024ರಂದು ನಡೆದ ಶಿಕ್ಷಣ ಮಂಡಳಿಯ ನಿರ್ಣಯದಂತೆ 2023–24ನೇ ಸಾಲಿನಲ್ಲಿ ಪರೀಕ್ಷೆ ಬರೆಯಲು ಅವಕಾಶವನ್ನು ನೀಡಲಾಗಿದೆ. ಪರೀಕ್ಷೆಗಳಿಗೆ ಹಾಜರಾಗಲು ದ್ವಿಗುಣ ಅವಧಿಯಲ್ಲಿ (Double the Duration) ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು, ಸಂಬಂಧಿಸಿದ ಕೋರ್ಸ್‌ಗಳಿಗೆ ಹಾಲಿ ಚಾಲ್ತಿಯಲ್ಲಿರುವ ದಂಡ ಶುಲ್ಕದ ಜೊತೆಗೆ **ಹೆಚ್ಚುವರಿ ದಂಡಶುಲ್ಕ ರೂ. 3000/–** (ಮೂರು ಸಾವಿರ) ಗಳನ್ನು ನಿಗದಿತ ಪರೀಕ್ಷಾ ಶುಲ್ಕದೊಂದಿಗೆ onlineನಲ್ಲಿ ಪಾವತಿಸಲು ಸೂಚಿಸಲಾಗಿದೆ.

| | | |
|---|---|---|
| **ಪ್ರಾಯೋಗಿಕ / ಲಿಖಿತ ಪರೀಕ್ಷೆಗಳ ದಿನಾಂಕ** | | |
| 1 | ಪ್ರಾಯೋಗಿಕ ಪರೀಕ್ಷೆಗಳು | **ಸೈದ್ಧಾಂತಿಕ ಲಿಖಿತ ಪರೀಕ್ಷೆಗಳ ಪ್ರಾರಂಭವಾಗುವ ಮೊದಲು** |
| 2 | ಸೈದ್ಧಾಂತಿಕ ಲಿಖಿತ ಪರೀಕ್ಷೆಗಳು | **ಸೆಪ್ಟೆಂಬರ್/ಅಕ್ಟೋಬರ್ 2025** |
| **ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ದಿನಾಂಕಗಳು** | | |
| 1 | ದಂಡ ಶುಲ್ಕವಿಲ್ಲದೆ | **ದಿ.01–09–2025 ರಿಂದ 15–09–2025 ರವರೆಗೆ** |
| 2 | ರೂ.500/– ರ ದಂಡ ಶುಲ್ಕದೊಂದಿಗೆ | **ದಿ. 16–09–2025 ರಿಂದ 20–09–2025** |

**ಪರೀಕ್ಷಾ ಶುಲ್ಕದ ವಿವರಗಳು**

| Sl. No | Paper Details | M.A./M.Com./B.A./B.Com./B.B.M/ BBA./B.Sc. (per year) | B.L.I.Sc./M.Sc. Maths (per year) | All M.Sc./M.L.I.Sc. (per year) | M. A. Education Course (per year) | M.Sc. Biotechnology Course (per year) |
|---|---|---|---|---|---|---|
| 1 | One Paper | Rs.490/- | Rs.590/- | Rs.785/- | Rs.975/- | Rs.1170/- |
| 2 | Two Papers | Rs.875/- | Rs.975/- | Rs.1170/- | Rs.1370/- | Rs.1945/- |
| 3 | Three Papers | Rs.1170/- | Rs.1465/- | Rs.1755/- | Rs.2140/- | Rs.2540/- |
| 4 | Four & Above | Rs.1660/- | Rs.1945/- | Rs.2340/- | Rs.2920/- | Rs.3310/- |
| 5 | Practicals: | One Practical paper – Rs.590/- | Two Practical papers – Rs.785/- | | Three Practical papers – Rs.975/- | |
| 6 | Dissertation fee for UG courses shall be | | Rs.1370/- | | | |
| | Dissertation fee for PG courses shall be | | Rs.1945/- | | | |

**ಸೂಚನೆ:**

- ಪರೀಕ್ಷಾ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು. ಯಾವುದಾದರೂ ಅಧ್ಯಯನ ಕೇಂದ್ರಗಳನ್ನು ಮುಚ್ಚಲಾಗಿದ್ದಲ್ಲಿ ಹತ್ತಿರದ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು. ಪರೀಕ್ಷಾ ಕೇಂದ್ರಗಳ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
- ಈ ಅವಕಾಶವು ಕೊನೆಯ ಅವಕಾಶವಾಗಿದ್ದು, ಮುಂದಿನ ದಿನಗಳಲ್ಲಿ ಯಾವುದೇ ಪರೀಕ್ಷೆಗಳಿಗೆ ಅವಕಾಶವನ್ನು ನೀಡಲಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಪು.ತಿ.ನೊ.

<u>ವಿದ್ಯಾರ್ಥಿಗಳಿಗೆ ಸೂಚನೆ:</u>

ವಿದ್ಯಾರ್ಥಿಗಳು online ಮುಖಾಂತರ ಅರ್ಜಿ ಸಲ್ಲಿಸಲು www.kuvempu.ac.in ನಲ್ಲಿ student portal ಗೆ Login ಆಗಿ ಪಾವತಿಸಬಹುದು.

ಕುಲಸಚಿವರು (ಪರೀಕ್ಷಾಂಗ)
ಕುಲಸಚಿವರು (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ,
ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ-577 451.

<u>ಗೆ,</u>

1. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧ್ಯಯನ ಕೇಂದ್ರದ ಕೋ-ಆರ್ಡಿನೇಟರ್‌ಗಳಿಗೆ (ಯು.ಜಿ/ಪಿ.ಜಿ ಪರೀಕ್ಷೆಗಳು)
3. ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಉಪಕುಲಸಚಿವರು / ಸಹಾಯಕ ಕುಲಸಚಿವರು / ಅಧೀಕ್ಷಕರು
4. ಮಾನ್ಯ ಕುಲಪತಿಗಳು, ಇವರ ಆಪ್ತ ಕಾರ್ಯಾಲಯ/ಕುಲಸಚಿವರು (ಆಡಳಿತ)/ಕುಲಸಚಿವರು (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5. ಫ್ಯಾಕಲ್ಟಿ ಮೇಲ್ವಿಚಾರಕರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಅಧಿಸೂಚನೆಯ ಮಾಹಿತಿಯನ್ನು ವಿಶ್ವವಿದ್ಯಾಲಯದ ಅಂತರಜಾಲದಲ್ಲಿ ಪ್ರಕಟಿಸುವುದು.
6. ನಿರ್ದೇಶಕರು, ವಿಶ್ವವಿದ್ಯಾಲಯ ಕೇಂದ್ರಿಯ ಗಣಕಕಾರ್ಯ ಸೌಲಭ್ಯ ಮತ್ತು ಮಾಹಿತಿ ತಂತ್ರಜ್ಞಾನ ಘಟಕ (ಯು.ಸಿ.ಸಿ.ಎಫ್.), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
7. ಕೋ-ಆರ್ಡಿನೇಟರ್, Outsource ಕೇಂದ್ರ, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.